# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 799 (981) |
| ಸದಸ್ಯರ ಹೆಸರು | : | ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15.12.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರಿ ಶಾಲೆ ಮತ್ತು ಕಾಲೇಜುಗಳ ಆವರಣದಲ್ಲಿ ಸಾಕಷ್ಟು ಸ್ಥಳಾವಕಾಶ ಲಭ್ಯವಿದ್ದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಕುಡಿಯುವ ನೀರಿನ ಉದ್ದೇಶಕ್ಕಾಗಿ Over Head Tank (OHT) ನಿರ್ಮಾಣ ಮಾಡಲು ಶಾಲಾ ಸ್ಥಳವನ್ನು ಹಸ್ತಾಂತರಿಸಲು ಅವಕಾಶ ಇದೆಯೇ; | ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 69 ಯೋಸಕ 2009 ದಿನಾಂಕ: 19-03-2009 ರಂತೆ ಶಿಕ್ಷಣ ಇಲಾಖೆಗೆ ಸೇರಿದ ಜಮೀನನ್ನು/ನಿವೇಶನವನ್ನು ಅನ್ಯ ಇಲಾಖೆಗೆ / ಬೇರೆ ಯಾರಿಗೂ ಹಸ್ತಾಂತರಿಸಲು ಅವಕಾಶವಿರುವುದಿಲ್ಲ.<br><br>ಆದಾಗ್ಯೂ, ಸಾರ್ವಜನಿಕ ಹಿತದೃಷ್ಟಿಯಿಂದ ಒಂದು ವೇಳೆ ಸರ್ಕಾರದ ಒಂದು ಇಲಾಖೆಯ ಜಾಗವನ್ನು/ಜಮೀನನ್ನು ಮತ್ತೊಂದು ಇಲಾಖೆಗೆ ಹಸ್ತಾಂತರಿಸಬೇಕಾದ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 32 ಎಲ್‌ಜಿಪಿ 2019 ದಿನಾಂಕ:01.02.2021 ರಂತೆ ಜಾಗವನ್ನು/ಜಮೀನನ್ನು ನೀಡಬೇಕಾದ ಮತ್ತು ಪಡೆಯಬೇಕಾದ ಇಲಾಖಾ ಸಚಿವರುಗಳ ಪರಸ್ಪರ ಒಪ್ಪಿಗೆ ಪಡೆದು ನಿಯಮಾನುಸಾರ ಜಮೀನನ್ನು ಹಸ್ತಾಂತರಿಸಬಹುದಾಗಿರುತ್ತದೆ. |
| ಆ | ಇದ್ದಲ್ಲಿ, ಶಾಲಾ/ಕಾಲೇಜಿನ ಸ್ಥಳವನ್ನು ಸಂಬಂಧಪಟ್ಟವರಿಗೆ ಹಸ್ತಾಂತರ ಮಾಡುವ ಸಕ್ಷಮ ಪ್ರಾಧಿಕಾರ ಯಾವುದು; (ವಿವರ ನೀಡುವುದು) | ಶಾಲಾ/ಕಾಲೇಜಿನ ಸ್ಥಳವನ್ನು ಜಾಗವನ್ನು/ಜಮೀನನ್ನು ನೀಡಬೇಕಾದ ಮತ್ತು ಪಡೆಯಬೇಕಾದ ಇಲಾಖಾ ಸಚಿವರುಗಳ ಪರಸ್ಪರ ಒಪ್ಪಿಗೆ ಪಡೆದು ಸಂಬಂಧಪಟ್ಟವರಿಗೆ ಹಸ್ತಾಂತರ ಮಾಡುವ ಸಕ್ಷಮ ಪ್ರಾಧಿಕಾರ ಸರ್ಕಾರ ಆಗಿರುತ್ತದೆ. |
| ಇ | ಸಾರ್ವಜನಿಕ ಹಿತದೃಷ್ಟಿಯಿಂದ ಕುಡಿಯುವ ನೀರಿನ ಉದ್ದೇಶಕ್ಕಾಗಿ ಶಾಲಾ/ಕಾಲೇಜಿನ ಸ್ಥಳವನ್ನು ಹಸ್ತಾಂತರ ಮಾಡುವ ಸಂಬಂಧ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆಯೇ; ಇದ್ದಲ್ಲಿ ಮಾರ್ಗಸೂಚಿಗಳನ್ನು ಒಳಗೊಂಡ ಆದೇಶ ಪ್ರತಿ ನೀಡುವುದು? | ಸಾರ್ವಜನಿಕ ಹಿತದೃಷ್ಟಿಯಿಂದ ಒಂದು ವೇಳೆ ಸರ್ಕಾರದ ಒಂದು ಇಲಾಖೆಯ ಜಾಗವನ್ನು/ಜಮೀನನ್ನು ಮತ್ತೊಂದು ಇಲಾಖೆಗೆ ಹಸ್ತಾಂತರಿಸಬೇಕಾದ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 32 ಎಲ್‌ಜಿಪಿ 2019 ದಿನಾಂಕ:01.02.2021 ರಂತೆ ಜಾಗವನ್ನು/ಜಮೀನನ್ನು ನೀಡಬೇಕಾದ ಮತ್ತು ಪಡೆಯಬೇಕಾದ ಇಲಾಖಾ ಸಚಿವರುಗಳ ಪರಸ್ಪರ ಒಪ್ಪಿಗೆ ಪಡೆದು ನಿಯಮಾನುಸಾರ ಜಮೀನನ್ನು ಹಸ್ತಾಂತರಿಸಬಹುದಾಗಿರುತ್ತದೆ.<br>ಆದೇಶದ ಪ್ರತಿ **ಅನುಬಂಧ-1** ರಲ್ಲಿ ಲಗತ್ತಿಸಿದೆ) |

**ಇಪಿ 397 ಯೋಸಕ 2025**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

ಅನುಬಂಧ - 1

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರದ ಒಂದು ಇಲಾಖೆ/ನಿಗಮ/ಮಂಡಳಿಯ ವಶದಲ್ಲಿರುವ ಜಮೀನನ್ನು ಮತ್ತೊಂದು ಇಲಾಖೆ/ನಿಗಮ/ಮಂಡಳಿಯ ವಶಕ್ಕೆ ಹಸ್ತಾಂತರಿಸುವ ಬಗ್ಗೆ

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 32 ಎಲ್‌ಜಿಪಿ 2020, ದಿನಾಂಕ: 17.03.2020.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅರೆ ಸರ್ಕಾರಿ ಪತ್ರ ಸಂಖ್ಯೆ ಮುಕಾ/217966/2021 ದಿನಾಂಕ: 21.01.2021

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದ ಮೂಲಕ ಸರ್ಕಾರದ ಒಂದು ಇಲಾಖೆ/ನಿಗಮ ಮಂಡಳಿಯ ವಶದಲ್ಲಿರುವ ಜಮೀನನ್ನು ಮತ್ತೊಂದು ಇಲಾಖೆ/ನಿಗಮ/ಮಂಡಳಿಯ ವಶಕ್ಕೆ ಹಸ್ತಾಂತರ ಮಾಡುವ ಪ್ರಸ್ತಾವನೆಗಳಿಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ಪತ್ರದಲ್ಲಿ ಸರ್ಕಾರಿ ಜಮೀನನ್ನು ಒಂದು ಇಲಾಖೆ/ನಿಗಮ/ಮಂಡಳಿಯಿಂದ ಮತ್ತೊಂದು ಇಲಾಖೆ/ನಿಗಮ/ಮಂಡಳಿಗೆ ಹಸ್ತಾಂತರಿಸಬೇಕಾದ ಸಂದರ್ಭಗಳಲ್ಲಿ ಜಮೀನನ್ನು ಕೊಡಬೇಕಾದ ಇಲಾಖೆ ಮತ್ತು ಪಡೆಯಬೇಕಾಗಿರುವ ಇಲಾಖೆಗಳು ತಮ್ಮ ಪರಸ್ಪರ ಒಪ್ಪಿಗೆ ಹೊಂದಿರುವುದನ್ನು ದೃಢಪಡಿಸಿಕೊಂಡು ಅಂತಹ ಪ್ರಸ್ತಾವನೆಗಳಿಗೆ ಸಂಬಂಧಪಟ್ಟ ಇಲಾಖೆಗಳ ಸಚಿವರುಗಳ ಒಪ್ಪಿಗೆಯನ್ನು ಪಡೆದು ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಪತ್ರವನ್ನು ಪರಿಗಣಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 32 ಎಲ್‌ಜಿಪಿ 2019**
**ಬೆಂಗಳೂರು, ದಿನಾಂಕ: 01.02.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಸರ್ಕಾರಿ ಜಮೀನನ್ನು ಒಂದು ಇಲಾಖೆ/ನಿಗಮ ಮಂಡಳಿಯಿಂದ ಮತ್ತೊಂದು ಇಲಾಖೆ/ನಿಗಮ/ಮಂಡಳಿಗೆ ಹಸ್ತಾಂತರಿಸಬೇಕಾದ ಸಂದರ್ಭಗಳಲ್ಲಿ ಜಮೀನನ್ನು ನೀಡುವ ಮತ್ತು ಪಡೆಯುವ ಇಲಾಖೆಗಳ ಪರಸ್ಪರ ಸಮ್ಮತಿಯೊಂದಿಗೆ, ಸಂಬಂಧಪಟ್ಟ ಇಲಾಖಾ ಸಚಿವರುಗಳ ಒಪ್ಪಿಗೆಯೊಂದಿಗೆ ಜಮೀನನ್ನು ನಿಯಮಾನುಸಾರ ಹಸ್ತಾಂತರಿಸುವುದು.

ಈ ಹಿಂದೆ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 32 ಎಲ್‌ಜಿಪಿ 2019 ದಿನಾಂಕ: 17.03.2020 ರ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ. ಬಲರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-1).

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಸದರಿ ಆದೇಶವನ್ನು ವಿಶೇಷ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.

ಪ್ರತಿಗೆ:

1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.

Scanned with CamScanner